ಶ್ರೀ ಹೆಚ್. ಶಿವಪ್ಪ : ಈ ವಾಲ್ಯೂಯೇಷನ್ ಕಮಿಟಿಗೆ ಸರ್ಕಾರದವರು ಹೀಗೆಯೇ ಮಾಡಬೇಕೆಂದು ಗೈಡ್‌ಲೈನ್ಸ್ ಕೊಟ್ಟಿದ್ದಾರಾ? ಆಮೇಲೆ ಸೈಂಟಿಫಿಕ್ ಆಗಿ ಮಾಡಲಿಕ್ಕೆ ಯಾರಾದರೂ ಎಕ್ಸ್‌ಪರ್ಟ್ಸ್‌ಗಳನ್ನು ಈ ಸಮಿತಿಯಲ್ಲಿ ಇನ್ವಾಲ್ವ್ ಮಾಡಿದ್ದೀರಾ? ಯಾವ ಆಧಾರದಮೇಲೆ ಮಾಡುತ್ತಿದ್ದೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೆ, ಕಾನೂನು ಪ್ರಕಾರ ಇದೇ ರೀತಿ ಮಾಡುವುದು. ಆದರೆ ಹಿರಿಯ ಸದಸ್ಯರಾಗಿರತಕ್ಕಂಥ ತಾವು ಯಾವುದೋ ಒಂದು ಉದಾಹರಣೆಯನ್ನು ಹೇಳಿದಿರಿ, ಆದರೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಗ ಆರ್.ಟಿ. ನಗರದಲ್ಲಿ ನಾನು ಇದ್ದೇನೆ. ಅಲ್ಲಿ ವಾಲ್ಯೂಯೇಷನ್ ಕಮಿಟಿಯವರು ಐದುನೂರು ರೂಪಾಯಿ ಎಂದು ವರದಿ ಕೊಟ್ಟಿದ್ದಾರೆ. ನಿಜವಾಗಿಯೂ ಇವೊತ್ತು ಲ್ಯಾಂಡ್ ವ್ಯಾಲ್ಯೂ ಕಡಿಮೆಯಾಗಿದೆ ಎಂದರೆ ಆರ್.ಟಿ. ನಗರದಲ್ಲಿ ಹನ್ನೊಂದುನೂರು ರೂಪಾಯಿ ಚದರ ಅಡಿಗಿಂತ ಕಡಿಮೆ ಮಾರುವುದಿಲ್ಲ. ಆದರೂ ನಾವು ಫಿಕ್ಸ್ ಮಾಡುವುದು 50 ಪರ್ಸೆಂಟ್ ಇದೆ. ಕೆಲವೊಂದು ಏರಿಯಾದಲ್ಲಿ ಹಾಗೆ ಆಗಿದೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ, ಅದಕ್ಕೆ ರೀ ಎಗ್ರಾಮಿನ್ ಮಾಡಿಸುತ್ತೇನೆ.

ವಿಟ್ಲದಲ್ಲಿ ಕೃಷಿ ಮಾರುಕಟ್ಟೆಗೆ ಸೇರಿದ ರಸ್ತೆಗಳ ಅಭಿವೃದ್ಧಿ

583 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ಕ್ಷೇತ್ರದಲ್ಲಿರುವ ಕೃಷಿ ಮಾರುಕಟ್ಟೆಗೆ ಸೇರಿದ ರಸ್ತೆಗಳ ಅಭಿವೃದ್ಧಿಗೆ 1995-96, 1996-97, 1997-98ನೇ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) ಸದರಿ ರಸ್ತೆಗಳ ನಿರ್ವಹಣೆಗೆ (ಮೆಂಟನೆನ್ಸ್) ಸರ್ಕಾರವು ಹಣ ಬಿಡುಗಡೆ ಮಾಡಲಾಗಿದೆಯೇ, ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ವಿಟ್ಲ ವಿಧಾನ ಸಭಾ ಕ್ಷೇತ್ರದಲ್ಲಿ 1995-96ನೇ ಸಾಲಿನ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು 1996-97ನೇ ಸಾಲಿನಲ್ಲಿ ಕೈಗೊಂಡಿದ್ದು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದೇ ರೀತಿ 1996-97ನೇ ಸಾಲಿನ ರಸ್ತೆಗಳನ್ನು 1997-98ನೇ ಸಾಲಿನಲ್ಲಿ ಅಭಿವೃದ್ಧಿಗೊಳಿಸಲು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಂಬಂಧಪಟ್ಟ ಸಮಿತಿಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಲಾಗಿದೆ.

ಆ) ಸದರಿ ಪ್ರಸ್ತಾವನೆಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಐವತ್ತು ಕಿ.ಮೀ. ರಸ್ತೆಯನ್ನು ಕೃಷಿ ಮಾರುಕಟ್ಟೆಯವರು ತೆಗೆದುಕೊಂಡಿದ್ದಾರೆ. ಹಿಂದೆ ಸರ್ಕಾರವನ್ನು ಕೇಳಿದಾಗ ಜಿಲ್ಲಾ ಪಂಚಾಯತ್‌ಗೆ ಹಣ ಒದಗಿಸುತ್ತಾ ಇಲ್ಲ. ಆದುದರಿಂದ ಅದರ ಸುಧಾರಣೆಗೆ ಸಾಧ್ಯವಾಗುತ್ತಿಲ್ಲ.

ಾಗಿ ಕೃಷಿ ಮಾರುಕಟ್ಟೆಯಿಂದ ಆ ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತಾರೆಂಬ ದೃಷ್ಟಿಯಿಂದ ಜಿಲ್ಲಾ ಪಾಯತ್‌ನ ಪ್ರಮುಖ ರಸ್ತೆಗಳನ್ನು ಕೃಷಿ ಮಾರುಕಟ್ಟೆಗೆ ಬಿಟ್ಟು ಕೊಟ್ಟಿದ್ದೇವೆ. ಆದರೆ ಈ ಮೂರು ರ್ಷಗಳಲ್ಲಿ ಕೇವಲ 15 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಕೇವಲ 50 ಕಿ.ಮೀ., ಂಸ್ತುಗಳಿಗೆ ಮೂರು ವರ್ಷಗಳಲ್ಲಿ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದನ್ನು ಮೆಂಟೇನನ್ಸ್ ಮಾಡುವಂತಹ ವ್ಯವಸ್ಥೆ ಇಲ್ಲ. ಇವತ್ತು ಅಲ್ಲಿ ಕೃಷಿ ಮಾರುಕಟ್ಟೆಗೆ ಬಿಟ್ಟುಕೊಟ್ಟಂತಹ ರಸ್ತೆಗಳು ವಾಹನಗಳು ಸಂಚಾರ ಮಾಡುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿದೆ. 1995-96ನೇ ಸಾಲಿಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವಂಥಾದ್ದು. 1996-97ಕ್ಕೆ ಪುನಃ 15 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದನ್ನು ಇದುವರೆಗೂ ಖರ್ಚು ಮಾಡಿಲ್ಲ, ಮತ್ತೆ 1997-98ನೇ ಸಾಲಿನ ಹಣವನ್ನು ತಕ್ಷಣ ಬಿಡುಗಡೆ ಮಾಡುತ್ತೀರಾ? ಇದರ ಜೊತೆಗೆ ಈಗ ಇರುವಂತಹ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರಾ? ಅಂದರೆ ಒಟ್ಟು ಈ 30 ಲಕ್ಷ ರೂಪಾಯಿಗಳನ್ನು 1997-98ನೇ ಸಾಲಿಗೆ ಖರ್ಚು ಮಾಡುತ್ತೀರಾ? ಮತ್ತೆ ಮೆಂಟೇನನ್ಸ್ ಬೇರೆ ಹಣವನ್ನು ಬಿಡುಗಡೆ ಮಾಡುತ್ತೀರಾ? ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಹೆಚ್. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಈ ರಸ್ತೆಗಳನ್ನು ದಿ: 14-11-1995ರಲ್ಲಿ ತೆಗೆದುಕೊಳ್ಳಬೇಕೆಂದು ಗೌವರ್ನಮೆಂಟ್ ಆರ್ಡರ್ ಆದ್ದರಿಂದ ಈ ಕಾರ್ಯಕ್ರಮವನ್ನು ಸ್ವಲ್ಪ ತಡವಾಗಿ ಆರಂಭ ಮಾಡಿದ್ದೇವೆ. 1995-96ಕ್ಕೆ ಬಿಡುಗಡೆಯಾಗಬೇಕಾಗಿದ್ದ ಹಣವನ್ನು 1996-97ರಲ್ಲಿ ಬಿಡುಗಡೆ ಮಾಡಿದ್ದೇವೆ. 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಲ್ಲಿ 12 ಕಿ.ಮೀ ರಸ್ತೆಯನ್ನು ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ. 1996-97ನೇ ಸಾಲಿನ ಹಣವನ್ನು ಈಗ ಬಿಡುಗಡೆ ಮಾಡುತ್ತಾ ಇದ್ದೇವೆ. ಇದು ಖರ್ಚಾದ ತಕ್ಷಣವೇ 1997-98ಕ್ಕೆ ಇನ್ನು 15 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿಕೊಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ತಾವು 15 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುತ್ತೀರಿ. ಈಗ 1997-98ರ ಹಣವನ್ನು ಬಿಡುಗಡೆ ಮಾಡಿಲ್ಲ. ಈಗ 1996-97ನೇ ಸಾಲಿನ ಹಣವನ್ನು ಬಿಡುಗಡೆ ಮಾಡಿ ಖರ್ಚು ಮಾಡಿಲ್ಲ. ಈಗ ಮೆಂಟೇನನ್ಸ್‌ಗೆ ಹೇಗೆ ಮಾಡುತ್ತೀರಿ? ಈಗ ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಮಳೆ ಜಾಸ್ತಿ ಇದೆ. ಇದರಿಂದಾಗಿ ರಸ್ತೆ ಎಲ್ಲಾ ಹಾಳಾಗುತ್ತಿದೆ ಹೀಗಾಗಿ ನಮಗೆ ಹಣವಿಲ್ಲದಿದ್ದರೆ ಮೆಂಟೇನನ್ಸ್ ಮಾಡುವುದಕ್ಕೆ ಹೇಗೆ ಸಾಧ್ಯ? ಅದಕ್ಕೋಸ್ಕರ ನಮಗೆ ಹಣಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಹೆಚ್. ನಾಗಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಬಳಿ ಮೆಂಟೇನನ್ಸ್‌ಗೆ ಎಂದು ಯಾವುದೇ ಹಣವಿಲ್ಲ. ಈಗ ನಾವು ರಸ್ತೆಯನ್ನು ಮಾಡಿ ಜಿಲ್ಲಾ ಪರಿಷತ್ತಿಗೆ ಅದನ್ನು ವಹಿಸಿಕೊಡುತ್ತೇವೆ. ಅವರೇ ಈ ರಸ್ತೆಗಳನ್ನು ಮೆಂಟೇನೆನ್ಸ್ ಮಾಡಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಆ ಕೆಲಸವನ್ನು ಮಾಡಿಲ್ಲ.

ಶ್ರೀ ಹೆಚ್. ನಾಗಪ್ಪ : ನಾವು ಈಗಾಗಲೇ ಒಂದು ಸರ್ಕಾರಿ ಆಜ್ಞೆಯನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸಿ ಕೊಟ್ಟಿದ್ದೇವೆ. ಅವರಿಗೆ ಈ ರಸ್ತೆಗಳನ್ನು ನೀವೇ ಮೆಂಟೇನ್ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಕೃಷಿ ಮಾರುಕಟ್ಟೆಯವರಿಗೆ ಪ್ರತಿ ವರ್ಷ ೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಉಳಿದಂಥಾದ್ದನ್ನು ಜಿಲ್ಲಾಪರಿಷತ್ತಿಗೆ ಮೆಂಟೆನೆನ್ಸ್‌ಗೆ ಎಂದು ಬಿಟ್ಟು ಕೊಟ್ಟರೆ ಆ ಕೆಲಸವನ್ನು ಮಾಡಬಹುದು. ನಮಗಂತೂ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ, ಅಂತಹ ಪರಿಸ್ಥಿತಿಯಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಸಹಾಯಕ್ಕೆ ಬರಬೇಕು. ನಾನು ಹೋದ ಸಾರಿಯೂ ಈ ಪ್ರಶ್ನೆಯನ್ನು ಕೇಳಿದ್ದೆ. ನೀವು ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲೂ 50 ಕಿ.ಮೀ. ರಸ್ತೆಗಳನ್ನು ತೆಗೆದುಕೊಂಡು 3-4 ವರ್ಷಗಳಾಯಿತು. ಅವತ್ತು ನಾನು ಏನು ಸಲಹೆ ಕೊಟ್ಟಿದ್ದೆನೆಂದರೆ ಪ್ರತಿ ವರ್ಷ ನೀವು ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಾ, ಆ ಪ್ರಮಾಣಕ್ಕೆ ಎಷ್ಟು ಕಿ.ಮೀ. ರಸ್ತೆ ಬೇಕೋ ಅಷ್ಟನ್ನು ಕೇಳಿ, ನಾವು ಕೊಡುತ್ತೇವೆ. ಅದನ್ನು ರಸ್ತೆ ಮಾಡಿ, ಮತ್ತೆ ಮೆಂಟೇನೆನ್ಸ್‌ಗೆ ಸಂಬಂಧಪಟ್ಟ ಇಲಾಖೆಗೆ ಕೊಡುತ್ತೀರಿ, ಅಂದಮೇಲೆ ನೀವು ಏನು ಮಾಡಿದ್ದೀರಿ. ತಾವು 50 ಕಿ.ಮೀ. ಎಂದು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲೂ ತೆಗೆದುಕೊಂಡಿದ್ದೀರಿ, ಆದರೆ ನನ್ನ ತಾಲ್ಲೂಕಿನಲ್ಲಿ ಬೇರೆ ಇಲಾಖೆಯಲ್ಲಿ, ಜಿಲ್ಲಾ ಪರಿಷತ್ತಿನಲ್ಲಿ ದುಡ್ಡು ಇದೆ. ಆ ದುಡ್ಡನ್ನು ಕೊಡೋಣವೆಂದರೆ ಎಲ್ಲಾ ರಸ್ತೆಗಳನ್ನು ಇವರು ತೆಗೆದುಕೊಂಡಿದ್ದಾರೆ. ನಾವು ಆ ದುಡ್ಡನ್ನು ಜಿಲ್ಲಾ ಪರಿಷತ್ತಿನವರಿಗೆ ಕೊಟ್ಟರೆ ಅವರು ಆ ಕೆಲಸವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ, ಸಂಬಂಧಪಟ್ಟಂತಹ ಇಲಾಖೆಯವರು ಹೇಳುತ್ತಾರೆ, ಇವರು ಮಾಡುವುದಿಲ್ಲ. ಅದಕ್ಕೋಸ್ಕರ ನೀವು ಐದು ಕಿ.ಮೀ.ಗೆ ದುಡ್ಡು ಕೊಟ್ಟರೆ ನೀವು ಅಷ್ಟನ್ನೇ ತೆಗೆದುಕೊಳ್ಳಿ. ನೀವು 50 ಕಿ.ಮೀ. ಏಕೆ ತೆಗೆದುಕೊಂಡು ಇಟ್ಟುಕೊಂಡಿದ್ದೀರಿ. ನೀವು ಆ ರಸ್ತೆಯನ್ನು ಮೆಂಟೇನ್ ಮಾಡುವುದಿಲ್ಲವೆಂದು ಹೇಳುತ್ತೀರಿ. ಆ ರಸ್ತೆಗಳಲ್ಲಿ ಗುಂಡಿ ಬಿದ್ದರೆ ಜಿಲ್ಲಾ ಪರಷತ್ತಿನವರೂ ರಿಪೇರಿ ಮಾಡುವುದಿಲ್ಲ. ಆ ಕೆಲಸವನ್ನು ನೀವು ಮಾಡುವುದಿಲ್ಲ.ಇದಕ್ಕೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಬೇಕು. ಇದಕ್ಕೆ ಇವತ್ತೇ ತಾವು ಜಿ.ಓ. ಇಷ್ಯೂಮಾಡಿ, ನಿಮಗೆ ಎಷ್ಟು ಬೇಕೋ ಅಷ್ಟು ಕಿ.ಮೀ. ರಸ್ತೆಯನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ನಿಮ್ಮ ಹತ್ತಿರ ನಮಗೆ ದುಡ್ಡು ಬೇಕೆಂದು ಬೇಡುತ್ತಾ ಇದ್ದೇವೆ. ಈ ವರ್ಷ ಐದು ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಿ ಅದನ್ನು ಖರ್ಚು ಮಾಡಿ, ಮುಂದಿನ ವರ್ಷ ಇನ್ನು ಐದು ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಿ ಆಗ ನಾವು ಯಾವ ರೋಡು ಕೊಡಬೇಕೆಂದು ತೀರ್ಮಾನ ಮಾಡಿ ಕೊಡುತ್ತೇವೆ. ಆದುದರಿಂದ ದಯಮಾಡಿ ಅದನ್ನು ಇವತ್ತೇ ವಿತ್ ಡ್ರಾ ಮಾಡಿ. ಹೀಗೆಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತೀರಾ?

ಶ್ರೀ ಹೆಚ್. ನಾಗಪ್ಪ : ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ಆರು ತಿಂಗಳಿಂದ ಇದೇ ಉತ್ತರವನ್ನು ನೀಡುತ್ತಿದ್ದಾರೆ.

ಅಧ್ಯಕ್ಷರು : ಅವರು ಮಾಡುತ್ತಾರೆ. ಅವರು ಸ್ವಭಾವತಃ ಮಾತು ಕಡಿಮೆ ಆಡುತ್ತಾರೆ, ಆದರೆ ಕೆಲಸವನ್ನು ಮಾಡುತ್ತಾರೆ. ಮಾನ್ಯ ಮಂತ್ರಿಯವರು ಆಗಬಹುದೆಂದು ಒಪ್ಪಿಕೊಂಡಿದ್ದಾರೆ, ನಾನು ಪರ್ಷ್ಯೂ ಮಾಡಿ ಕಳುಹಿಸಿಕೊಡುತ್ತೇನೆ.